# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **2461** |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 23.03.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಭೂಮಾಪಕರ ಹುದ್ದೆಗಳು ಹಲವಾರು ವರ್ಷ ಗಳಿಂದ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 103 ಭೂಮಾಪಕರ ಹುದ್ದೆಗಳು ಮಂಜೂರಾಗಿದ್ದು, 102 ಹುದ್ದೆಗಳು ಭರ್ತಿಯಾಗಿರುತ್ತವೆ. ನೆಲಮಂಗಲ ತಾಲ್ಲೂಕಿನಲ್ಲಿ 1 ಭೂಮಾಪಕರ ಹುದ್ದೆ ಮಾತ್ರ ಖಾಲಿ ಇರುತ್ತದೆ. ರಾಮನಗರ ಜಿಲ್ಲೆಯಲ್ಲಿ ಒಟ್ಟು 100 ಹುದ್ದೆಗಳು ಮಂಜೂರಾಗಿದ್ದು, 97 ಹುದ್ದೆಗಳು ಭರ್ತಿ ಯಾಗಿರುತ್ತವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ 3 ಭೂಮಾಪಕರ ಹುದ್ದೆಗಳು ಮಾತ್ರ ಖಾಲಿ ಇರುತ್ತವೆ. |
| ಆ) | ಸದರಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಬಾಕಿ ಯಿರುವ ಹದ್ದುಬಸ್ತು ಪ್ರಕರಣ ಗಳು, ಇ-ಸ್ವತ್ತು, ಕೋರ್ಟ್ ಡಿಕ್ರಿ ಪ್ರಕರಣಗಳು, ಕೆರೆ ಮತ್ತು ಸರ್ಕಾರಿ ಜಮೀನುಗಳ ಒತ್ತುವರಿ ತೆರವು, ಭೂಮಂಜೂರಿ ಜಮೀನುಗಳ ದುರಸ್ತಿಗಳ ಇತ್ಯರ್ಥಗೊಳ್ಳಲು ವರ್ಷಗಳಿಗೂ ಅಧಿಕ ಸಮಯ ತೆಗೆದುಕೊಳ್ಳುತ್ತಿರುವುದರಿಂದ ರೈತರಿಗೆ ಹೆಚ್ಚಿನ ತೊಂದರೆಯಾಗು ತ್ತಿರುವುದು ನಿಜವಲ್ಲವೇ; | ಪ್ರತಿ ತಾಲ್ಲೂಕುಗಳಲ್ಲಿ ಸರ್ಕಾರದ ಅಳತೆ ಕೆಲಸಗಳಿಗಾಗಿ ಒಬ್ಬರು ಸರ್ಕಾರಿ ಭೂಮಾಪಕರನ್ನು ತಹಶೀಲ್ದಾರ್ ಅಧೀನದಲ್ಲಿ ನೇಮಿಸಲಾಗುತ್ತಿದೆ. ಆದರೆ ಸರ್ಕಾರಿ ಜಮೀನುಗಳ ಅಳತೆಗಾಗಿ ಸಂಬಂಧಿಸಿದ ಜಿಲ್ಲೆಗಳ ಭೂದಾಖಲೆಗಳ ಉಪ ನಿರ್ದೇಶಕರಿಂದ ಹೆಚ್ಚುವರಿ ಭೂಮಾಪಕರು ನಿಯೋಜನೆಗೆ ಪ್ರಸ್ತಾವನೆ ಬಂದಲ್ಲಿ ಅನುಮತಿ ನೀಡಲಾಗುತ್ತಿದೆ.<br>ತಾಲ್ಲೂಕಿಗೆ ಅನುಗುಣವಾಗಿ ಭೂಮಾಪಕರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಇವುಗಳಲ್ಲಿ ಬಹುತೇಕ ಹುದ್ದೆಗಳು ಭರ್ತಿಯಾಗಿರುತ್ತವೆ. ಇದರ ಜೊತೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 127 ಹಾಗೂ ರಾಮನಗರ ಜಿಲ್ಲೆಯಲ್ಲಿ 145 ಪರವಾನಗಿ ಭೂಮಾಪಕರುಗಳು ಸಾರ್ವಜನಿಕರ ಅಳತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೆಚ್ಚು ಅರ್ಜಿಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಅರ್ಜಿಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜಿಸಲಾಗುತ್ತಿದೆ. ಅಲ್ಲದೆ ಕರ್ನಾಟಕ ಭೂಕಂದಾಯ ಅಧಿನಿಯಮದಡಿ ತಿದ್ದುಪಡಿ ತಂದು ಬಾಕಿ ಅರ್ಜಿಗಳನ್ನು ಸೂಕ್ತ ರೀತಿಯಲ್ಲಿ ಪರವಾನಗಿ ಭೂಮಾಪಕರು ಹಾಗೂ ಸರ್ಕಾರಿ ಭೂಮಾಪಕರುಗಳಿಗೆ ಹಂಚಿಕೆ ಮಾಡಿ ಸಾರ್ವಜನಿಕರ ಅಳತೆ ಕಾರ್ಯಗಳಿಗೆ ತೊಂದರೆ ಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಹಾಗಿದ್ದಲ್ಲಿ, ಹಲವಾರು ವರ್ಷ ಗಳಿಂದ ಖಾಲಿಯಿರುವ ಭೂಮಾಪಕರ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ 700 ಭೂಮಾಪಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ನೇರ ನೇಮಕಾತಿ ಸಮಯದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. |

**ಸಂಖ್ಯೆ: ಕಂಇ 101 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು